# ಕನ್ನಡದ ಪುಣ್ಯ

'ಬಿಳೀ ಮೋಡ – ಕರೀ ಮೋಡ', ಈ ಕವಿತೆ ಕನ್ನಡದ ಪುಣ್ಯ. ಇದು ಪುಟಾಣಿಗಳಷ್ಟೇ ಅಲ್ಲ, ಕನ್ನಡದ ಎಲ್ಲರೂ ಓದಬೇಕಾದ ಕವಿತೆ. ಕಾರಣ ಬಹಳ ಸರಳ ಮತ್ತು ಸ್ಪಷ್ಟ. ಇದು ಅಪ್ಪಟ ಕವಿತೆ. ಹೇಗೆ ಅಂತೀರಾ?

ನೆಲದಲ್ಲೆಲ್ಲ ಚದುರಿ ಬಿದ್ದಿರುವ ಪಾರಿಜಾತದ ಹೂವುಗಳು ಮಾಲೆಯಾದಾಗ ಒಂದು ಹೊಸ ಸೊಗಸು ಮೂಡುವಂತೆ, ಬಿಡಿ ಬಿಡಿ ಅಕ್ಷರಗಳು ಪದವಾಗಿ, ಪದವೃಂದವಾಗಿ ಪದ್ಯವಾಗುವುದು. ಭಾಷೆಯಲ್ಲಿ ಸಂಭವಿಸುವ ಒಂದು ಅಪೂರ್ವ ವಿದ್ಯಮಾನ ಪದ್ಯ. ಹೂವಿಗೆ ಪರಿಮಳದಂತೆ, ಭಾಷೆಗೆ ಭಾವವೇ ಜೀವಾಳ.

ಈ ಕವಿತೆಯಲ್ಲಿ 'ಕಣ್ಣಾ ಮುಚ್ಚೆ ಕಾಡೇ ಗೂಡೇ' ಮಕ್ಕಳಾಟವು ನೆಲದಲ್ಲಲ್ಲ, ಬಾನ ಬಯಲಿನಲ್ಲಿ ನಡೆದಿದೆ. ಆಡುತ್ತಿರುವುದು ಮಕ್ಕಳಲ್ಲ, ಬಿಳೀ ಮೋಡ ಮತ್ತು ಕರೀ ಮೋಡ ಮತ್ತು ಒಂದು ತುಂಟ ಹಕ್ಕಿ.

ಈ ಕಲ್ಪನೆಯ ಸೊಗಸಿಗೆ ಸಾಟಿ ಇಲ್ಲ. ಇಲ್ಲಿ ಮಿಂಚು, ಮಳೆ, ಬಂಡೆ ಎಲ್ಲ ಕವಿಯ ಭಾವ ಸರೋವರದಲ್ಲಿ ಮಿಂದೆದ್ದು ಪಾತ್ರವಾಗುತ್ತವೆ. ಪ್ರಕೃತಿಯಲ್ಲಿ ಕಣ್ಣುಮುಚ್ಚಾಲೆಯ ಆಟ ನಿತ್ಯ ನಡೆದೇ ಇದೆ. ಯಾರೋ ಯಾರನ್ನೋ ಹುಡುಕುತ್ತಲೇ ಇದ್ದಾರೆ. ಹುಡುಕುವ ಸಂಗತಿ ಸಿಕ್ಕಿತೋ ಇಲ್ಲವೋ ಎಂಬುದಕ್ಕಿಂತ, ಹುಡುಕುವ ಪ್ರಕ್ರಿಯೆಯಲ್ಲಿರುವ ಸುಖ ಬಣ್ಣಿಸಲಾಗದ್ದು. ಈ ಆಟದಲ್ಲಿರುವ ಮೋಜು–ಮಜಾ ನಿತ್ಯನೂತನ, ಶುಭ್ರ.

ಹಾಗಾಗಿಯೇ ಇದು ಜೀವದ ಕವಿತೆಯಾಗಿ, ಮನದಲ್ಲಿ ಅಚ್ಚಳಿಯದೆ ಉಳಿದುಬಿಡುತ್ತದೆ.

**–ರಾಧೇಶ ತೋಳ್ಪಾಡಿ**

